ಸೀಟ್ ಸಿಕ್ಕಿತು. ಕಿಡಕಿಯ ಕಡೆಗೆ ಕುಳಿತುಕೊಂಡ ನಾನು ಓಡುತ್ತಿರುವ ರಸ್ತೆಯನ್ನೇ ನೋಡುತ್ತಿದ್ದೆ. ಮನಸ್ಸು ಮಾತ್ರ ವಿಭಾಳ ಬಗ್ಗೆಯೇ ಯೋಚಿಸುತ್ತಿತ್ತು. ಪಾಪ ಎಷ್ಟು ಬೇಸರ ಮಾಡಿಕೊಂಡಿದ್ದಾಳೆ.

'ವಿಭಾ, ಈ ಅತ್ತೆಯರೆಲ್ಲರೂ ಒಂದೇ ಅಲ್ಲವೇನೇ?' ಎಂದ ನಾನು ಸಾಂತ್ವನದ ಧ್ವನಿಯಲ್ಲಿ ಕೇಳಿದೆ: 'ನಿನ್ನ ಗಂಡ ದೇವೇಂದ್ರ ಹೇಗೆ?'

'ಹುಂ, ಅವರೇನೋ ಒಳ್ಳೆಯವರೇ. ಅಕ್ಕ ನಿಜ ಹೇಳಬೇಕೆಂದರೆ ಪ್ರೇಮಿ ಹಾಗೂ ಗಂಡನಲ್ಲಿ ಸಾಕಷ್ಟು ಅಂತರವಿರುತ್ತದೆ. ಅದು ಮದುವೆಯಾದ ಮೇಲಷ್ಟೇ ಗೊತ್ತಾಗುತ್ತದೆ...' ನಾನು ಅವಳ ಕಡೆಗೆ ನೋಡಿದೆ. ಅವಳು ಒಂದು ಪೋಸ್ಟರನ್ನು ನೆಟ್ಟ ದೃಷ್ಟಿಯಿಂದ ತಿರುತಿರುಗಿ ನೋಡುತ್ತಿದ್ದಳು. ಯಾವುದೋ ಡೆಂಟಲ್ ಕ್ಲಿನಿಕ್ಕಿನ ಜಾಹೀರಾತಾಗಿತ್ತು. ಅದರಲ್ಲಿರುವ ಮಗು ತುಂಬ ಮುದ್ದಾಗಿತ್ತು.

'ಆ ಮಗು ಎಷ್ಟು ಮುದ್ದಾಗಿದೆಯಲ್ಲವೇ?'

'ಹೌದಕ್ಕ ನನಗೂ ಇಂಥದೇ ಇನ್ನೊಂದು ಮಗು ಬೇಕೆನ್ನಿಸುತ್ತಿತ್ತು.'

'ಮತ್ತೆ ಆಗಬಹುದಿತ್ತಲ್ಲ.'

'ಹೇಗೆ ಆಗಬಹುದಿತ್ತು? ಒಂದು ರೀತಿಯಿಂದ ಪ್ರಸಾದನನ್ನು ಅತ್ತೆಯವರೇ ನೋಡಿಕೊಂಡಿದ್ದಾರೆ. ನನಗೂ ವಯಸ್ಸಾಯಿತು ಇನ್ನು ಆಗುವುದಿಲ್ಲ ಎನ್ನುತ್ತಾರೆ.'

'ಆದರೆ ಒಂದೇ ಮಗು ಬೋರಾಗಿ ಬಿಡುತ್ತದೆ, ಸ್ವಾರ್ಥಿಯೂ ಆಗುತ್ತದೆ.'

'ಅದು ನನಗೂ ಗೊತ್ತಕ್ಕ, ಅದು ಬೇರೆಯವರೊಡನೆ ಹೊಂದಿಕೊಂಡಿರುವುದಾಗಲೀ, ಇನ್ನೊಬ್ಬರ ಬಗ್ಗೆ ಯೋಚಿಸುವುದನ್ನಾಗಲೀ ಮಾಡುವುದಿಲ್ಲ. ನನ್ನ ಗಂಡನನ್ನೇ ನೋಡು, ಸ್ವಂತ ಬುದ್ಧಿಯೇ ಇಲ್ಲ. ಯಾವಾಗಲೂ ಅಮ್ಮನ ಮುದ್ದಿನಿಂದಾಗಿ ಅವರ ಸೆರಗು ಹಿಡಿದುಕೊಂಡೇ ಇರುತ್ತಾರೆ. ಇವರಿಂದಾಗಿ ನಾನು ದಿನ ದಿನಕ್ಕೂ ಮುದುಕಿಯಾಗುತ್ತಿದ್ದೇನೆ. ನನ್ನ ಇಚ್ಛೆಯಂತೆ ನನಗೆ ಏನೂ ಮಾಡಲೂ ಸ್ವಾತಂತ್ರ್ಯವೇ ಇಲ್ಲ.'

ಅಷ್ಟರಲ್ಲಿ ನಾವಿಳಿಯುವ ಜಾಗೆ ಬಂತು. ಒಳ್ಳೆಯದೇ ಆಯಿತೆನಿಸಿತು. ಇನ್ನು ಅವಳ ಅಸಹಾಯಕತೆಯ ಕತೆಯನ್ನು ಕೇಳಲು ನನ್ನಿಂದಾಗುತ್ತಿರಲಿಲ್ಲ. ಮನೆಗೆ ಬಂದೊಡನೆ ಅಮ್ಮ ನನ್ನನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡರು. 'ಏನು ಹೀಗೆ ಹೇಳದೇ ಕೇಳದೇ ಹೊರಟು ಬಿಡುವುದಾ? ಬೀಗರ ಮನೆಗೆ ಹೀಗಾ ಹೋಗುವುದು? ಏನೆಂದುಕೊಳ್ಳುತ್ತಾರೆ. ನಾವೆಲ್ಲ ಎಷ್ಟು ಗಾಬರಿಯಾಗಿದ್ದೇವೆಂದು ಗೊತ್ತಾ?'

'ಆಯಿತು, ಈಗ ಸುಮ್ಮನಿರುತ್ತೀಯಾ? ಎರಡು ಕಿಲೋಮೀಟರ್ ಆ ರಶ್‌ನಲ್ಲಿ ಬಸ್ಸಲ್ಲಿ ಬಂದು ಸುಸ್ತಾಗಿದೆ. ಬಂದ ತಕ್ಷಣ ಶುರು ಮಾಡಬೇಡ.' ರಶ್ಮಿ ಇಬ್ಬರಿಗೂ ಜ್ಯೂಸ್ ತಂದು ಕೊಟ್ಟು, 'ಅಡಿಗೆ ಆಗಿದೆ ಅತ್ತಿಗೆ, ಊಟ ಮಾಡಿಕೊಂಡೇ ಹೋಗಿ' ಎಂದಳು. 'ಇಲ್ಲ ರಶ್ಮಿ, ಈಗ ಊಟಕ್ಕೆ ಸಮಯವಿಲ್ಲ. ಮತ್ತೆ ಯಾವತ್ತಾದರೂ ಬರುತ್ತೇನೆ. ಅಕ್ಕ ನಾನು ಬರಲಾ? ಇನ್ನೂ ಕೆಲವು ದಿನ ಇರುವೆಯಲ್ಲವೇ? ಹೋಗುವಾಗ ಫೋನ್ ಮಾಡು; ಹೇಳದೇ ಹಾಗೇ ಹೋಗಿ ಬಿಡಬೇಡಿ.' ನಾನಿಲ್ಲಿ ಹೆಚ್ಚು ದಿನ ಇರುವುದು ಇವಳಿಗೂ ಸರಿ ಎನಿಸುವುದಿಲ್ಲವಾ! ಕೇಳಿ ನನಗೆ ಆಶ್ಚರ್ಯವಾಯಿತು. ಆದರೆ ಈ ಸಾರಿ ಸಿಟ್ಟು ಬರಲಿಲ್ಲ.

ವಿಭಾಳನ್ನು ಕಳಿಸಲು ರಸ್ತೆಯವರೆಗೆ ಅವಳೊಡನೆ ಹೋದೆ. ಹೋಗುತ್ತ– 'ವಿಭಾ, ಒಂದೆರಡು ದಿನಗಳಲ್ಲೇ ವಿವೇಕನಿಗೆ ರಿಸರ್ವೇಶನ್ ಮಾಡಿಸಲು ಹೇಳುತ್ತೇನೆ. ನೀನೂ ನನ್ನೊಡನೆ ಬಂದು